**ವಿದ್ಯಾರ್ಥಿಗಳು ದೇಶದ ಭವಿಷ್ಯದ ಬಗ್ಗೆ ಯೋಚಿಸಬೇಕು–ಮಿತ್ರ**

ಯಲಹಂಕ: ಕುಮಾರವ್ಯಾಸನು ತನ್ನ ವಚನಗಳಲ್ಲಿ ಹೇಳಿರುವಂತೆ, ಇಂದಿನ ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವುದರೊಂದಿಗೆ ದೇಶದ ಭವಿಷ್ಯವನ್ನು ರೂಪಿಸಬೇಕಾಗಿದೆ. ಆದ್ದರಿಂದ ವಿದ್ಯಾರ್ಥಿಗಳಿಂದ ತಂದೆ ತಾಯಿಯರಿಗೆ, ಶಿಕ್ಷಕರಿಗೆ ಗೌರವವನ್ನು ನೀಡಿ ಸನ್ಮಾರ್ಗದಲ್ಲಿ ನಡೆಯಬೇಕಾಗಿದೆ" ಎಂದು ಖ್ಯಾತ ಸಾಹಿತಿ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಅ.ರಾ.ಮಿತ್ರರವರು ತಿಳಿಸಿದರು. ಯಲಹಂಕ ಉಪನಗರದಲ್ಲಿರುವ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಕಾಲೇಜು ದಿನದ ಸಮಾರಂಭದಲ್ಲಿ ಅವರು ಭಾಷಣ ನೀಡುತ್ತಿದ್ದರು.ಹಿಂದಿನ ಕಾಲದ ವಿದ್ಯಾರ್ಥಿಗಳಿಗೂ, ಇಂದಿನ ವಿದ್ಯಾರ್ಥಿಗೂ ಹೋಲಿಸಿದಾಗ, ವಿದ್ಯಾರ್ಥಿದ್ರುಷ್ಟಿಕೋನದಲ್ಲಿ ಭಾರಿ ಬದಲಾವಣೆಯಾಗಿರುವುದು ಸ್ಪಷ್ಟವಾಗುತ್ತದೆ. ಗುರುಕುಲದ ಪದ್ಧತಿಯಲ್ಲಿ ವಿದ್ಯೆಯನ್ನು ಕಲಿಯುತ್ತಾ,ಗುರು–ಹಿರಿಯರಿಗೆ ಗೌರವವನ್ನು ನೀಡುತ್ತಿದ್ದ ಅಂದಿನ ವಿದ್ಯಾರ್ಥಿಗಳಿಗೂ, ಅಧ್ಯಾಪಕರನ್ನೇ ಬೆದರಿಸುವ ಇಂದಿನ ವಿದ್ಯಾರ್ಥಿಗಳಿಗೂ ಅವರು ಹೋಲಿಕೆ ನೀಡಿದರು. "ಭರತದಲ್ಲಿಂದು ವಿವಿಧ ಸ್ತರಗಳಲ್ಲಿರುವ ಭ್ರಷ್ಟಾಚಾರವನ್ನು ಮೂಲದಿಂದಲೇ ಕಿತ್ತೊಗೆಯಬೇಕೆಂದು" ಅವರು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಇದೇ ಕಾರ್ಯಕ್ರಮದಲ್ಲಿ ಶೇಷಾದ್ರಿ ಪುರಂ ಶಿಕ್ಷಣ ದತ್ತಿಯ ಅಧ್ಯಕ್ಷರಾದ ನಂಜಪ್ಪನವರು, ಕಾರ್ಯದರ್ಶಿಗಳಾದ ಪುಟ್ಟನರಸಯ್ಯ ಮತ್ತು ಶೇಷಾದ್ರಿಪುರಂ ಕಾಲೇಜಿನ ಪ್ರಾಂಶುಪಾಲರಾದ ಸಿದ್ಧಯ್ಯನವರೂ ಮಾತನಾಡಿದರು. ನಂತರ ಕಾಲೇಜು ವಿದ್ಯಾರ್ಥಿಗಳಿಂದ ವಿವಿಧ ವಿನೋದಾವಳಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.ಇದಕ್ಕೆ ಮುನ್ನ,ಬೆಳಗಿನ ಕಾರ್ಯ ಕ್ರಮದಲ್ಲಿ ಶೇಷಾದ್ರಿಪುರಂ ಶಾಲೆಯ "ಶಾಲಾದಿನ"ವನ್ನು ಆಚರಿಸಲಾಯಿತು.ಈ ಕಾರ್ಯಕ್ರಮದಲ್ಲಿ ಬಾಲ ಪ್ರತಿಭೆಗಳು ತಮ್ಮ ಕೌಶಲವನ್ನು ಪ್ರದರ್ಶಿಸದರು.

Jan 21st 1994 Hosa Diganta Vidyarthigalu Desada Bhavisya - A.R.Mitra